ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಶುಕ್ರವಾರ, ದಿನಾಂಕ : 29 ನೇ ಜನವರಿ, 2021

BRC/CRC ಸೇವೆಯನ್ನು ಮುಂದುವರೆಸುವ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ) -

09 (41) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) NRDWP ಕೇಂದ್ರ ಪುರಸ್ಕೃತ ಯೋಜನೆಯ Support Activity ಘಟಕದಡಿ 2011-12ನೇ ಸಾಲಿನಲ್ಲಿ ನೇಮಕಗೊಂಡು ಕಾರ್ಯ ನಿರ್ವಹಿಸುವ BRC/CRC ಗಳ ಸೇವೆಯನ್ನು ಮುಂದುವರಿಸುವ ಕುರಿತು ಈ ಹಿಂದಿನ ಅಧಿವೇಶನದಲ್ಲಿ ಸಚಿವರು ಭರವಸೆ ನೀಡಿರುವುದು ನಿಜವೇ; ಹಾಗಿದ್ದಲ್ಲಿ ಭರವಸೆ ಈಡೇರಿದೆಯೇ;

(ಆ) ಸರ್ಕಾರದ ಭರವಸೆಯಂತೆ ಯಾವ-ಯಾವ ಜಿಲ್ಲೆಗಳ ಎಷ್ಟು ಮಂದಿ BRC/CRC ಗಳ ಸೇವೆಯನ್ನು ಮುಂದುವರಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು)

(ಇ) ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರು WP 5628/2020 ಹಾಗೂ ಇತರೆ ನ್ಯಾಯಾಲಯಗಳಲ್ಲಿ BRC/CRC ಸಂಯೋಜಕರುಗಳು ತಮ್ಮ ಸೇವೆಯನ್ನು ಜಲ್ ಜೀವನ್ ಮಿಷನ್ ಯೋಜನೆಯಲ್ಲೂ ಮುಂದುವರಿಸಲು ಧಾವೆ ಹೂಡಿರುವುದು ನಿಜವೇ; ಹಾಗಾದರೆ ಸರ್ಕಾರ ಇದರ ಸಂಬಂಧ ಯಾವ ಕ್ರಮ ಕೈಗೊಂಡಿದೆ;

(ಈ) BRC/CRC ಸಂಯೋಜಕರುಗಳ ಮನವಿಯ ಮೇರೆಗೆ ಕೇಂದ್ರ ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ರಾಜ್ಯ ಸರ್ಕಾರಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ಮಾತ್ರ

ನೀಡುತ್ತಿರುವುದಾಗಿ ಸೂಚಿಸಿದ್ದು, ಸಿಬ್ಬಂದಿ ನೇಮಕ ವಿಚಾರ ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿರುವುದಾಗಿ ತಿಳಿಸಿರುವುದು ನಿಜವೇ; (ವಿವರವಾಗಿ ಮಾಹಿತಿ ನೀಡುವುದು)

(ಉ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 7610 CH ರಂತೆ ಸರ್ಕಾರವು Policy dicision ಮಾಡಬೇಕಾಗಿರುವುದು ನಿಜವೇ;

(ಊ) ಯಾವ ಕಾಲಮಿತಿಯಲ್ಲಿ ಸರ್ಕಾರವು Policy dicision ಮಾಡಿ BRC/CRC ಗಳ ಸೇವೆಯನ್ನು ಯಥಾವತ್ತಾಗಿ ಮುಂದುವರೆಸುವುದು?